ಛೇರ್ಮನ್ :— ತಾವು ಸರ್ಕಾರದ ಗಮನ ಸೆಳೆದಿದ್ದೀರಿ, ಸಚಿವರು ಆ ಕುರಿತು ಕ್ರಮ ಕೈಗೊಳ್ಳುವುದಾಗಿ ಹೇಳಿರುವುದರಿಂದ ಇನ್ನು ಹೆಚ್ಚಿನ ಚರ್ಚೆ ಬೇಡ.

ಉ) ಕಮಲಾಪುರದಲ್ಲಿ ಗಂಡೋರಿ ನಾಲಾಯೋಜನೆ ಕುರಿತು.

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಸನ್ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗ ಜಿಲ್ಲೆಗೆ ಸೇರಿರುವ ನನ್ನ ಮತಕ್ಷೇತ್ರವಾದ ಕಮಲಾಪುರದಲ್ಲಿ ಗಂಡೋರಿ ನಾಲಾ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರ 1995-96ರಲ್ಲಿ ಉತ್ತರ ಕೊಟ್ಟಿದ್ದು ಕ್ರಿ.ಶ. 2000 ಇಸವಿಯೊಳಗೆ ಯೋಜನೆ ಮುಗಿಯುವುದಾಗಿ ತಿಳಿಸಿತ್ತು. ಯೋಜನೆಯ ಕಾರ್ಯದ ಗುತ್ತಿಗೆ ವಹಿಸಿಕೊಂಡಿರುವ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಇರುವುದರಿಂದ ಆ ಹಣ ಪಾವತಿಯಾಗದಿರುವುದರಿಂದ ಅವರುಗಳು ಕಂಗಾಲಾಗಿದ್ದಾರೆ. ಕೆಲಸ ನಿಲ್ಲಿಸಿರುವುದರಿಂದ ಯೋಜನೆ ಬಹಳ ಕುಂಠಿತಗೊಂಡಿದೆ. ಕಮಲಾಪುರ ಕ್ಷೇತ್ರದಲ್ಲಿ ರೈತರ ಪರವಾಗಿರುವ ಗಂಡೋರಿ ನಾಲಾ ಪ್ರಾಜೆಕ್ಟ್ ಒಂದೇ ಇದ್ದು ಪ್ರಸಕ್ತವರ್ಷ ಇದಕ್ಕಾಗಿ ಐವತ್ತು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಮಾನ್ಯ ಸಚಿವರು ಗುಲ್ಬರ್ಗಾದಲ್ಲಿ ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾರೆ. ಆದರೂ ಇದುವರೆವಿಗೂ ಒಂದು ಕೋಟಿ ರೂಪಾಯಿಯಷ್ಟು ಹಣ ಮಾತ್ರ ಬಿಡುಗಡೆಯಾಗಿದ್ದು, ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಏಳು ಕೋಟಿ ರೂಪಾಯಿಗಳು ಬಾಕಿ ಇರುವುದರಿಂದ ಅವರುಗಳು ಕೆಲಸ ನಿಲ್ಲಿಸಿದ್ದು, ಹಣ ಬಾರದೆ ಕಂಗಾಲಾಗಿರುವುದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಹಾಗೂ ಯೋಜನೆಯನ್ನು ಯಾವಾಗ ಮುಗಿಸುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ಮಾನ್ಯ ಛೇರ್ಮನ್‌ರವರೆ, ಗಂಡೋರಿ ನಾಲಾ ಸುಮಾರು 103 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು ಎಂಟು ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡಲು ಉದ್ದೇಶಿಸಲಾಗಿದೆ. ಮಾನ್ಯ ಸದಸ್ಯರು ಹೇಳಿರುವಂತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಇದುವರೆವಿಗೂ ಸುಮಾರು 21 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಇದರಲ್ಲಿ ಕ್ರಿಟಿಕಲ್ ವರ್ಕ್ಸ್ ಇದ್ದು ಕ್ರಿ.ಶ. 2000 ಇಸವಿಯೊಳಗೆ ಮುಗಿಯುತ್ತದೆ. ಇದಕ್ಕಾಗಿ 50 ಕೋಟಿ ರೂಪಾಯಿಗಳು ಬೇಕಾಗುವುದರಿಂದ ಈ ಕುರಿತು ಮಾಯ ಮುಖ್ಯಮಂತ್ರಿಗಳ ಹತ್ತಿರ ಚರ್ಚಿಸಿದ್ದು ಸದರಿ ಯೋಜನೆಯನ್ನು ಹೊಸದಾಗಿ ರಚನೆಯಾಗುವ ಕರ್ನಾಟಕ ನೀರಾವರಿ ನಿಗಮದಡಿ ತೆಗೆದುಕೊಳ್ಳಬೇಕೆನ್ನುವ ಒಂದು ಯೋಚನೆ ಇದೆ. ಎರಡನೆಯದಾಗಿ, ಭಾರತ ಸರ್ಕಾರದವರು ಎ.ಐ.ಡಿ.ಪಿ.ಯಡಿ ಶೇಕಡ 50 ರಷ್ಟು ಸಾಲ ಕೊಡುತ್ತಿದ್ದು ಈ ಯೋಜನೆಯಡಿ ಗಂಡೋರಿ ನಾಲಾ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿದ್ದೇವೆ. ಇನ್ನೊಂದು ವಾರದಲ್ಲಿ ಈ ಕುರಿತು ತೀರ್ಮಾನ ಮಾಡಲಿದ್ದೇವೆ. ಇವೊತ್ತು ಸಂಜೆ 5.00 ಗಂಟೆಗೆ ಈ ಕುರಿತು

ಏರ್ಪಡಿಸಿದ್ದ ಸಭೆಯನ್ನು ಮುಖ್ಯಮಂತ್ರಿಗಳು ಮುಂದೂಡಿದ್ದಾರೆ. ಅಲ್ಲಿನ ಯೋಜನೆಗೆ ಇದುವರೆವಿಗೂ 21 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿ ಕೆಲಸಮಾಡಿದ್ದು ಯೋಜನೆ ಪೂರ್ಣಗೊಳಿಸಲು ಇನ್ನೂ 30-40, ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದಾದ್ದಿಂದ ಬರುವ 2-3 ವರ್ಷಗಳಲ್ಲಿ ಮುಗಿಸಿಕೊಡುತ್ತೇವೆ. ಕರ್ನಾಟಕ ನೀರಾವರಿ ನಿಗಮದಡಿ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಮುಖ್ಯಮಂತ್ರಿಯವರಿಗೆ ಒಪ್ಪಿಸುತ್ತೇನೆಂಬ ಮಾತನ್ನು ಹೇಳುತ್ತಿದ್ದೇನೆ.

ಉ) ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ ಗ್ರಾಮಗಳಿಗೆ ಸೌಲಭ್ಯ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್ (ಹುನಗುಂದ) :— ಮಾನ್ಯ ಛೇರ್ಮನ್‌ರವರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಸುಮಾರು 35 ಗ್ರಾಮಗಳು ಜಲಾವೃತವಾಗಿ ಮುಳುಗಡೆಯಾಗಿದ್ದು ಮನೆ, ಮಠ, ಆಸ್ತಿ ಜಮೀನುಗಳನ್ನು ಕಳೆದುಕೊಂಡು ಸಂತ್ರಸ್ತರಾದ ಜನರಿಗೆ ಯೋಜನೆಯಿಂದ ಏನಾದರೂ ಲಾಭ ಸಿಗಬೇಕೆಂಬ ದೃಷ್ಟಿಯಿಂದ ನಾನು ಸನ್ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರನ್ನು ಹಿಂದೆ ಅನೇಕ ಬಾರಿ ಭೇಟಿ ಮಾಡಿ ಅವರ ಗಮನ ಸೆಳೆದಿದ್ದೆ. ನಾಲ್ಕೂವರೆ ಟಿ.ಎಂ.ಸಿ. ನೀರು ಸಂಗ್ರಹದ ರಾಮ್‌ತಾಳ್ ಮೇಜರ್ ಲಿಫ್ಟ್ ಇರಿಗೇಶನ್‌ಗೆ ಸಂಬಂಧಿಸಿದಂತೆ ಬಚಾವತ್ ಆಯೋಗದ ತೀರ್ಪಿನಲ್ಲಿರುವುದನ್ನು ಬದಲಿಸಿ ಮರೋಳ್ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ತೀರ್ಮಾನಿಸಿ ಆ ಕುರಿತ ಫ್ರಿಲಿಮಿನರಿ ರಿಪೋರ್ಟ್ ಅನ್ನು ಸರ್ಕಾರ ಈಗಾಗಲೇ ತರಿಸಿದೆ. ಆದರೆ, ಆ ಯೋಜನೆ 'ಬ' ಸ್ಕೀಮಿನಲ್ಲಿರದೆ 'ಎ' ಸ್ಕೀಮೀನಲ್ಲಿ ಬರುವುದರಿಂದ ಇದುವರೆವಿಗೂ ಆ ಯೋಜನೆಯನ್ನು ಪ್ರಾರಂಭಿಸಿರುವುದಿಲ್ಲ. ಯೋಜನೆಯಿಂದ ಸಂತ್ರಸ್ತರಾದ ಜನರಿಗೆ ಅನ್ಯಾಯವಾಗಿರುವುದರಿಂದ ತಕ್ಷಣವೇ ಮರೋಳ್ ಏತನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಸ್ಪಷ್ಟ ನಿಲುವನ್ನು ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ರಾಮತಾಳ್ ಏತ ನೀರಾವರಿ ಯೋಜನೆಯಲ್ಲಿ ಬಚಾವತ್ ತೀರ್ಪಿನಲ್ಲಿ 4 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು 22,260 ಹೆಕ್ಟೇರ್‌ಗೆ ನೀರು ಕೊಡಬೇಕೆಂದು ಹೇಳಿ 98 ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ಈಗಾಗಲೇ ಪ್ರತಿಯೊಂದು 'ಎ' ಸ್ಕೀಮ್‌ನೊಳಗಡೆ ಮಾಡಿ ಫೈನಲ್ ಸ್ಟೇಜ್‌ನಲ್ಲಿರತಕ್ಕಂಥ ಈ ಸ್ಟೇಜ್‌ನಲ್ಲಿ ಇದನ್ನು ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ತಾವು ಏನು ಕೇಳಿದ್ದೀರಿ. ಮುರಗೋಳ್ ಏತನೀರಾವರಿ ಅದರ ಬಗ್ಗೆ ನಾನು ಈಗಾಗಲೇ ತಮಗೆ ಎರಡು ಮೂರು ಸಾರಿ ಹೇಳಿದ್ದೆ. 'ಬ' ಸ್ಕೀಮ್‌ನಲ್ಲಿ ತೆಗೆದುಕೊಳ್ಳೋಣ ಎಂದು ಹೇಳಿ. ನಮಗೆ ಇರತಕ್ಕಂಥ